


ಸಂಜೆ ಆರು ಗಂಟೆಯಾಗುತ್ತಿತ್ತು. ಇನ್ನೂ ಬಿಸಿಲು ಕಂದಿರಲಿಲ್ಲ. ಈಜು ಕೊಳದ ದಡದ ಮೇಲಿನ ಡೆಕ್ಕ್ ಚೇರಿನಲ್ಲಿ ಮೈ ಚೆಲ್ಲಿ, ಕೈಯಲ್ಲೊಂದು ಬಿಯರನ್ನು ಹಿಡಿದು ಹೀರುವ ತವಕದಲ್ಲಿ ನಾನು ಚಡಪಡಿಸುತ್ತಿದ್ದೆ.

ಬಾರಿಗೆ ಹೋಗಿ ಒಂದು ಬಿಯರನ್ನು ಖರೀದಿಸಿ, ಹೂದೋಟವನ್ನು ಹಾದು ಈಜುಕೊಳದೆಡೆಗೆ ಹೆಜ್ಜೆ ಹಾಕಿದೆ. ಹೂದೋಟ ಸುಂದರವಾಗಿತ್ತು. ಬಿರಿದು ಕಂಗೊಳಿಸುತ್ತಿದ್ದ ಅಜೇಲಿಯಾ ಹೂಗಳು, ವಿನ್ಯಾಸಗೊಳಿಸಿದ ಹಸಿರು ಹಾಸು, ಗಾಳಿಗೆ ತೊಯ್ದಾಡುತ್ತಿರುವ ತೆಂಗಿನ ಮರಗಳ ಗರಿಗಳ ಮಧ್ಯೆ ಗಾಳಿ ನುಸುಳುವಾಗ ಕಾಡಿಗೆ ಬೆಂಕಿ ಬಿದ್ದಂತಹ ಶಬ್ದವಾಗುತ್ತಿತ್ತು. ಮರಗಳಿಂದ ಆರೋಗ್ಯಭರಿತ ಕಂದು